‘ಅಪ್ಪ, ನಾನಿವತ್ತು ನನ್ನ ಸ್ನೇಹಿತನೊಂದಿಗೆ ಇದ್ದೀನಿ. He wants me to stay. ನನಗೂ ಅವನು ಇಷ್ಟ... ಅವನಿಗೆ ಬೇಜಾರು ಮಾಡಲು ನನಗೆ ಮನಸಿಲ್ಲ... ಏನು ಮಾಡಲಿ?’ ಅಂತನ್ನುತ್ತಾಳೆ ಟೀನೇಜ್ ಮಗಳು. ಸ್ನೇಹಕೂಟದಲ್ಲಿರುವ ಅಪ್ಪನ ಫೋನ್‌ನಲ್ಲಿ ಸ್ಪೀಕರ್ ಆನ್ ಇರುತ್ತದೆ. ಎಲ್ಲರ ಕಣ್ಣುಗಳೂ ಆಶ್ಚರ್ಯದೊಂದಿಗೆ ಕಳವಳ ತುಂಬಿಕೊಳ್ಳುತ್ತವೆ. ‘ಏನಿದು, ಮಗು ಇಂಥ ಮಾತು ಕೇಳ್ತಿದೆಯಲ್ಲ!’ ಎನ್ನುವ ಆಶ್ಚರ್ಯ, ‘ಅಪ್ಪ ಏನು ಹೇಳಿಯಾನು!’ ಎನ್ನುವ ಕುತೂಹಲ, ‘ಹೀಗಾದರೆ ಈ ಪೀಳಿಗೆಯ ಗತಿ ಏನು?’ ಎನ್ನುವ ಆತಂಕ...

## ಏನು ಹೇಳಬಹುದು ಅಪ್ಪ!

ಹೀಗೇ ಮಾಡು, ಹೀಗೆ ಮಾಡಬೇಡ, ಹೀಗೇ ನಿರ್ಧರಿಸು ಅಂತ ಪುಂಖಾನುಪುಂಖ ಫರ್ಮಾನುಗಳನ್ನು ಹೊರಡಿಸುವುದಿಲ್ಲ. ಏಕೆಂದರೆ ಹೀಗೆ ಪ್ರತಿಕ್ರಿಯಿಸಿದರೆ ಅವಳು ಇನ್ನೊಮ್ಮೆ ಇಂತಹ ವಿಷಯಗಳನ್ನು ಚರ್ಚಿಸಲಾರಳು, ಗಮನಕ್ಕೂ ತರದೇ ಹೋದಾಳು ಎನ್ನುವುದು ಅವನಿಗೆ ಗೊತ್ತು. ಅಪ್ಪ ಹೇಳುತ್ತಾನೆ ‘ಮಗಳೇ, ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ನಾನು ನಿನಗೆ ಹೇಳುವುದಿಲ್ಲ. ಅದನ್ನು ಜೀವನವೇ ಕಲಿಸಿಕೊಡುತ್ತದೆ. ಆದರೆ, ಈ ನಿರ್ಧಾರ ನಿನಗೊಂದು ಕೆಟ್ಟ ಕನಸನ್ನು ಕಟ್ಟಿಡಬಾರದು ಕಂದಾ, ನಾವು ಯಾವತ್ತೂ ಯಾವುದೊ ಒತ್ತಡಕ್ಕೆ, ಯಾರನ್ನೋ ಖುಷಿ ಪಡಿಸುವುದಕ್ಕೆ ಸಂಬಂಧದಲ್ಲಿ ಧುಮುಕಬಾರದು...’

“ಖೇಲ್ ಖೇಲ್ ಮೇ” ಸಿನಿಮಾದ ಒಂದು ಅದ್ಭುತ ದೃಶ್ಯವಿದು. ಪ್ಲಾಸ್ಟಿಕ್ ಸರ್ಜನ್ ಡಾ. ರಿಷಭ್ ಮಲಿಕ್ ಪಾತ್ರದಲ್ಲಿ ಅಕ್ಷಯ್ ಕುಮಾರ್ ತಂದೆಯಾಗಿ ಆಡಿದ ಈ ಮಾತುಗಳು ಎಲ್ಲಾ ತಂದೆಯರಿಗೂ ತಾಯಿಯರಿಗೂ ತಮ್ಮ ಜವಾಬ್ದಾರಿಯನ್ನು ನೆನಪಿಸುವಂತಿವೆ.

***

ಸಣ್ಣ ವಯಸ್ಸಲ್ಲೇ ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬೇಕು ಎಂದು ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್ ಹೇಳಿದೆ. ಅತ್ಯಾಚಾರ ಪ್ರಕರಣವೊಂದರ ಜಾಮೀನು ಅರ್ಜಿ ವಿಚಾರಣೆಯ ವೇಳೆ ಸುಪ್ರೀಂ ಕೋರ್ಟ್ ಲೈಂಗಿಕ ಶಿಕ್ಷಣದ ಮಹತ್ವವನ್ನು ಎತ್ತಿಹಿಡಿದಿದೆ. ಆದರೆ ಲೈಂಗಿಕ ಶಿಕ್ಷಣ ಹೇಗಿರಬೇಕು, ಏನಿರಬೇಕು, ಏನನ್ನು ಒಳಗೊಂಡಿರಬೇಕು ಎನ್ನುವ ಗೊಂದಲದಲ್ಲಿರುವ ನಮಗೆ ಈ ಚಿತ್ರದ ದೃಶ್ಯ ಒಂದು ನಿಚ್ಚಳ ಮಾದರಿಯನ್ನು ಒದಗಿಸುತ್ತದೆ.

ಲೈಂಗಿಕ ಶಿಕ್ಷಣ ಬಹಳೆ ಸೂಕ್ಷ್ಮ ವಿಚಾರ. ಇಂತಹ ಸಂಗತಿಯನ್ನು ಮಕ್ಕಳೊಂದಿಗೆ ಹೇಗೆ ಚರ್ಚಿಸಬೇಕು, ಯಾವ ಭಾಷೆಯಲ್ಲಿ ಅವರಿಗೆ ಈ ಬಗ್ಗೆ ಮಾಹಿತಿ ಒದಗಿಸಬೇಕು ಎನ್ನುವುದೇ ಸದ್ಯದ ಬಹುದೊಡ್ಡ ಸವಾಲು. ಈ ಸವಾಲನ್ನು ಚರ್ಚೆ, ಸಂವಾದ, ವಿಶ್ಲೇಷಣೆಗಳ ಮೂಲಕ ಜಯಿಸಬೇಕಿದೆ.

